ಸಂದರ್ಶನ: ರಹಮತ್ ತರೀಕೆರೆ



## ಕನ್ನಡ ವಿದ್ವಾಂಸ ರೊಬೆರ್ತ್ ಜೆಯ್ದೆನ್‌ಬೊಸ್ ಅವರೊಂದಿಗೆ ಸಂವಾದ

# 'ಕನ್ನಡಕ್ಕೆ ವಿಸಿಬಿಲಿಟಿ ಇಲ್ಲ

**2019** ರ ಬೇಸಿಗೆ. ಜರ್ಮನಿಯ ಮ್ಯೂನಿಕ್ ನಗರದಲ್ಲಿ ಒಂದು ತಿಂಗಳು ಕಾಲ ಇರುವ ಪ್ರಸಂಗ ಬಂದಿತು. ಮಿತ್ರ ನಟರಾಜ ಬೂದಾಳರ ಮಗಳು–ಅಳಿಯ ಗೌರಿ ಮತ್ತು ದೀಪು, ಎಂಜಿನಿಯರುಗಳಾಗಿ ಅಲ್ಲಿದ್ದರು. ಮಗಳ ಮನೆಗೆ ಹೋಗುತ್ತ, ಬೂದಾಳ್ ದಂಪತಿ ನನ್ನನ್ನೂ ಬಾನುವನ್ನೂ ಎಳೆದುಕೊಂಡು ಹೋದರು. ಆಗ ಮ್ಯೂನಿಕ್ ವಿಶ್ವವಿದ್ಯಾಲಯದಲ್ಲಿ ಭಾರತಶಾಸ್ತ್ರದ ಪ್ರಾಧ್ಯಾಪಕರಾಗಿರುವ, ಪ್ರೊ. ರೊಬೆರ್ತ್ ಜೆಯ್ದೆನ್‌ಬೊಸ್ (1957) ಅವರನ್ನು ಭೇಟಿಯಾಗುವ ಆಲೋಚನೆ ಸುಳಿಯಿತು. ಜೆಯ್ದೆನ್‌ಬೊಸ್, ಜೈನ ವಿದ್ವಾಂಸರು. ನನ್ನ ಗುರುಗಳೂ ಲೇಖಕಿಯೂ ಆಗಿದ್ದ ವಿಜಯಾ ದಬ್ಬೆಯವರ ಜೀವನ ಸಂಗಾತಿಯಾಗಿದ್ದವರು; 17 ವರ್ಷ ಮೈಸೂರಲ್ಲಿದ್ದವರು; ಕನ್ನಡ ಕತೆ–ಕಾದಂಬರಿಗಳ ಮೇಲೆ ಸಂಶೋಧನೆ ಮಾಡಿ ('ದಿ ಕಾಫ್ ಬಿಕೇಂ ಆ್ಯನ್ ಆರ್ಫನ್') ಪ್ರಕಟಿಸಿದವರು; ಶಾಂತಿನಾಥ ದೇಸಾಯಿಯವರ ಕಾದಂಬರಿ 'ವಿಕ್ಷೇಪ'ವನ್ನು ಅನುವಾದಿಸಿದವರು; ಅವರ ಉಪನ್ಯಾಸವೊಂದನ್ನು ಕೇಳಿ ನಾನು ಬರೆದಿದ್ದ ಪತ್ರಕ್ಕೆ ಅವರಿಂದ ಉತ್ತರ ಬಂದು, ಸಣ್ಣಮಟ್ಟದ ಪರಿಚಯ ನಮ್ಮಿಬ್ಬರಲ್ಲಿತ್ತು. 'ಅರ್ಧದಿನ ನಿಮ್ಮ ಜತೆ ಕಾಲ ಕಳೆಯಬಹುದೇ' ಎಂದು ಬರೆದೆ. ಸಂತೋಷವಾಗಿ ಒಪ್ಪಿದರು. ಒಂದು ದಿನ ನಾವು ಮ್ಯೂನಿಕ್ ವಿಶ್ವವಿದ್ಯಾಲಯಕ್ಕೆ ಹೋದೆವು. ಅದು ಐದು ಶತಮಾನಗಳಷ್ಟು ಹಳೆಯ, ನೊಬೆಲ್ ಬಹುಮಾನಿತ ವಿಜ್ಞಾನಿಗಳನ್ನೂ ತತ್ತ್ವಶಾಸ್ತ್ರಜ್ಞರನ್ನೂ ಸೃಷ್ಟಿಸಿದ ವಿಶ್ವವಿದ್ಯಾಲಯ. ಅದರ ಹಳೆಯ ವಿದ್ಯಾರ್ಥಿಗಳ ಪಟ್ಟಿಯಲ್ಲಿ